<u>ಸಾಕ್ಷಿಯನ್ನು ದಿನಾಂಕ 18.04.2024 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಶ್ರೀ ಪಿ ಎಸ್ ಬಿ ವಕೀಲರಿಂದಃ</u>

19. ನನ್ನ ಮಗನ ವಿದ್ಯಾಭ್ಯಾಸದ ಖರ್ಚುಗಳನ್ನು ನಾನೇ ನೋಡಿಕೊಳ್ಳುತ್ತಿದ್ದೆ. ನನ್ನ ಮಗ 2019_20 ರವರೆಗೂ ವಿದ್ಯಾಭ್ಯಾಸ ಮಾಡಿದ್ದ. 2019_20 ರವರೆಗೂ ಎಸ್ ಎಸ್ ಎಲ್ ಸಿ ವಿದ್ಯಾಭ್ಯಾಸ ಮಾಡುತ್ತಿದ್ದ. ನಂತರ ಆತ ಬೆಂಗಳೂರಿಗೆ ಕೆಲಸ ಹುಡಿಕಿಕೊಂಡು ಹೋಗಿದ್ದ. ಎಸ್ ಎಸ್ ಎಲ್ ಸಿ ಕಲಿತ ನಂತರ ನನ್ನ ಮಗ ಏನು ವಿದ್ಯಾಭ್ಯಾಸ ಮಾಡಿದ್ದ ಎಂದು ನನಗೆ ಗೊತ್ತಿಲ್ಲ. ನನ್ನ ಮಗ ಡಿಪ್ಲೊಮೋ ಮೆಕಾನಿಕಲ್ ಇಂಜಿನೀಯರಿಂಗ್ ಕಲಿತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

20. ನನ್ನ ಮಗ ಚಿಂತಾಮಣಿಯ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಡಿಪ್ಲೋಮೋ ವ್ಯಾಸಾಂಗ ಮಾಡಿದ್ದಾನೆ ಎಂದರೆ ಸುಳ್ಳು. ದಿನಾಂಕ 04.12.1993 ರಂದು ನನ್ನ ಮಗನಿಗೆ ಡಿಪ್ಲೋಮೋ ವ್ಯಾಸಾಂಗ ಪ್ರಮಾಣ ಪತ್ರವನ್ನು ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗ ಎಸ್ ಎಸ್ ಎಲ್ ಸಿ ವಿದ್ಯಾಭ್ಯಾಸದ ನಂತರ ಬೇರೆ ಏನು ವಿದ್ಯಾಭ್ಯಾಸ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಮಗ ವೆಂಕಟಶಿವ ಮತ್ತು ನನ್ನ ನಡುವೆ ವೈಶಮ್ಯ ಇದ್ದ ಕಾರಣ ನನ್ನ ಮಗ ಎಸ್ ಎಸ್ ಎಲ್ ಸಿ ನಂತರ ಏನು ವಿದ್ಯಾಭ್ಯಾಸ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ವೈಶಮ್ಯ ಇರಲಿಲ್ಲ ಎಂದು ನುಡಿಯುತ್ತಾರೆ.

21. ಸಾಮಾನ್ಯವಾಗಿ ತಂದೆ ತಾಯಿಯರಿಗೆ ತಮ್ಮ ಮಕ್ಕಳು ಏನು ವ್ಯಾಸಾಂಗ ಮಾಡಿದ್ದಾರೆ ಎಂದು ತಿಳಿದಿರುತ್ತದೆ ಎಂದರೆ ಸರಿ. ನನ್ನ ಮಗ ಏನು ಮಾಡುತ್ತಿದ್ದಾನೆ ಎಂದು ತಿಳಿದುಕೊಳ್ಳುವ ಇಚ್ಛೆ ನನಗೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಬೆಂಗಳೂರಿಗೆ ಹೋದ ನಂತರ ನನ್ನ ದಿನಚರಿ ಮತ್ತು ಆತನ ದಿನಚರಿ ಬೇರೆ ಬೇರೆ ಯಾಗಿದ್ದವು ಎಂದರೆ ಸಾಕ್ಷಿ ಸುಂದರಂ ಫೈನಾನ್ಸ್ ನಿಂದ ಟ್ರಾಕ್ಟರ್ ನ್ನು ತೆಗೆಸಿ ಕೊಟಿದ್ದೆ ಎಂದು ನುಡಿಯುತ್ತಾರೆ. ಆ ಟ್ರಾಕ್ಟರ್ ಸಂಖ್ಯೆ ನನಗೆ ನೆನಪಿಲ್ಲ. ಈ ಕೇಸಿನಲ್ಲಿ ಆ ಟ್ರಾಕ್ಟರ್ ನ್ನು ಸೇರಿಸಿಲ್ಲ.

22. ನನ್ನ ಪ್ರತಿವಾದ ಪತ್ರದಲ್ಲಿ ವಾದಿ ಆ ಟ್ರಾಕ್ಟರ್ ನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದು ಹೇಳಿಲ್ಲ. ನಾನು ಸುಂದರಂ ಫೈನಾನ್ಸ್ ನಿಂದ ಸಾಲ ಮಾಡಿ ನನ್ನ ಮಗ ವೆಂಕಟಶಿವ ರವರಿಗೆ ಯಾವುದೇ ಟ್ರಾಕ್ಟರ್ ನ್ನು ತೆಗೆಸಿಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ಮಿನಿ ಲಾರಿಯಲ್ಲಿ ನೀರು ಸರಬರಾಜು ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಮಗ ಟ್ರಾಕ್ಟರ್ ನಲ್ಲಿ ನೀರಿನ ಸರಬರಾಜನ್ನು ಎಂದಿಗೂ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ವೆಂಕಟಶಿವ ತೀರಿಕೊಂಡ ಬಳಿಕ ಆತನ ಹೆಂಡತಿ ಮತ್ತು ಮಗನಿಗೆ ನಾನು ಯಾವುದೇ ಸೌಕರ್ಯವನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮಗ ವೆಂಕಟಶಿವ ತೀರಿಕೊಂಡ ಬಳಿಕ ಆತನ ಹೆಂಡತಿ ಮತ್ತು ಮಗನಿಗೆ ಸೌಕರ್ಯವನ್ನು ಮಾಡುತ್ತಿದ್ದೆ ಎಂದು ತಕರಾರಿನಲ್ಲಿ ಹೇಳಿಲ್ಲ ಎಂದರೆ ನನಗೆ ಗೊತ್ತಿಲ್ಲ.

23. ಈ ಕೇಸಿನಲ್ಲಿ ನಾನು ತಕರಾರನ್ನು ಸಲ್ಲಿಸಿದ್ದೇನೆ. ಆ ತಕರಾರಿನಲ್ಲಿ ನನ್ನ ಮಗ ವೆಂಕಟಶಿವ ತೀರಿಕೊಂಡ ಬಳಿಕ ಆತನ ಹೆಂಡತಿ ಮತ್ತು ಮಗನಿಗೆ ಸೌಕರ್ಯವನ್ನು ಮಾಡಿದ್ದೇನೆ ಎಂದು ಹೇಳಿಲ್ಲ ಕಾರಣ ಮೊದಲೇ ಸೌಕರ್ಯವನ್ನು ಮಾಡಿದ್ದೇನೆ. ಮೊದಲೇ ಸೌಕರ್ಯವನ್ನು ಮಾಡಿದ್ದೇನೆ ಎಂಬ ವಿಚಾರವನ್ನು ನನ್ನ ತಕರಾರಿನಲ್ಲಿ ಹೇಳಿಲ್ಲ ಎಂದರೆ ಸರಿ. ನನ್ನ ಮಗ ವೆಂಕಟಶಿವ ಬದುಕಿದ್ದಾಗಲೂ ಆತನ ಸೌಕರ್ಯ ಆತನದ್ದು, ನನ್ನ ಸೌಕರ್ಯ ನನ್ನದು ಎಂದರೆ ಸರಿಯಲ್ಲ.

24. ನನ್ನ ಮಗ ವೆಂಕಟಶಿವ ಸಂಪಾದನೆ ಮಾಡಿದ ಎಲ್ಲಾ ಆಸ್ತಿಗಳು ಆತನ ಹೆಸರಿನಲ್ಲಿ ಇವೆ ಎಂದರೆ ಸಾಕ್ಷಿ ಬಿಲ್ಡಿಂಗ್ ಮಾತ್ರ ಆತನ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಮಗ ವೆಂಕಟಶಿವನೇ ಆಸ್ತಿಗಳ ಕಂದಾಯವನ್ನು ಪಾವತಿ ಮಾಡುತ್ತಾ ಬರುತ್ತಿದ್ದ ಎಂದರೆ ಸಾಕ್ಷಿ ಆತನ ಹೆಸರಿನಲ್ಲಿ ಇರುವುದರಿಂದ ಆತನೇ ಪಾವತಿ ಮಾಡುತ್ತಿದ್ದ ಎಂದು ನುಡಿಯುತ್ತಾರೆ. ದಿನಾಂಕ 01.02.2007 ರಂದು ಬೇಗೂರು ಗ್ರಾಮ ಪಂಚಾಯತಿಯಿಂದ ನನ್ನ ಮಗ ವೆಂಕಟಶಿವ ನೀರನ್ನು ಸರಬರಾಜು ಮಾಡಲು ಪರವಾನಿಗೆಯನ್ನು ಪಡೆದುಕೊಂಡಿದ್ದರು ಎಂದರೆ ಸಾಕ್ಷಿ ಪರವಾನಿಗೆ ಪಡೆದದ್ದು ನನಗೆ ನೆನಪಿಲ್ಲ, ನೀರನ್ನು ಸರಬರಾಜು ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

25. ನನ್ನ ಮಗ ವೆಂಕಟಶಿವ ಮಣಿಪಾಲ್ ರೆಸಾರ್ಟ್ ಎಂಬ ಸ್ಥಳಕ್ಕೆ ನೀರಿನ ಸರಬರಾಜು ಮಾಡುತ್ತಿದ್ದ ಎಂದರೆ ಸರಿ. 600 ಜನ ವಸತಿ ಇರುವ ಕಡೆ ನೀರಿನ ಸರಬರಾಜನ್ನು ನನ್ನ ಮಗ ಮಾಡುತ್ತಿದ್ದ ಎಂದರೆ ಸಾಕ್ಷಿ ನಾನು ಮತ್ತು ನನ್ನ ಮಗ

ಜಂಟಿಯಾಗಿ ಸರಬರಾಜು ಮಾಡುತ್ತಿದ್ದೇವು ಎಂದು ನುಡಿಯುತ್ತಾರೆ. ನನ್ನ ಮಗ ವೆಂಕಟಶಿವ ಸಂಗಂ ಸರ್ಕಲ್ ನ ನಮ್ಮ ಮೆಟ್ರೋ ಯೋಜನೆಗೂ ಸಹ ನೀರು ಸರಬರಾಜು ಮಾಡುತ್ತಿದ್ದ ಎಂದರೆ ಸಾಕ್ಷಿ ಜಂಟಿಯಾಗಿ ಮಾಡುತ್ತಿದ್ದೇವು ಎಂದು ನುಡಿಯುತ್ತಾರೆ. ಆ ಮೂರು ಕಡೆ ನೀರು ಸರಬರಾಜು ಮಾಡುವುದರಿಂದ ನನ್ನ ಮಗ ವೆಂಕಟಶಿವ ರವರಿಗೆ ಎಷ್ಟು ಆದಾಯ ಬರುತ್ತಿತ್ತು ಎಂದು ನನಗೆ ಗೊತ್ತು. 2010_11 ನೇ ಸಾಲಿನಲ್ಲಿ ಆ ನೀರಿನ ಸರಬರಾಜಿನಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ನನಗೆ ನೆನಪಿಲ್ಲ, ಡೈರಿಯಲ್ಲಿ ಬರೆದಿದ್ದೇನೆ. ಡೈರಿಯಲ್ಲಿ ಆದಾಯದ ವಿವರವನ್ನು ಬರೆದಿದ್ದೇನೆ ಎಂದು ನನ್ನ ತಕರಾರಿನಲ್ಲಿ ಹೇಳಿಲ್ಲ. ಆ ಆದಾಯ ನನ್ನ ಮಗ ವೆಂಕಟಶಿವ ರವರ ಖಾತೆಗೆ ನೇರವಾಗಿ ಬರುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ನನ್ನ ಕೈಗೆ ಆ ಆದಾಯ ಬರುತ್ತಿತ್ತು ಎಂದು ನುಡಿಯುತ್ತಾರೆ.

26. ನನ್ನ ಕೈಗೆ ರೂ.2 ರಿಂದ 3 ಲಕ್ಷ ಆದಾಯ ಬರುತ್ತಿತ್ತು. ನನ್ನ ಕೈಗೆ ನಾನು ಹೇಳಿದಂತೆ ಯಾವುದೇ ಆದಾಯ ಬಂದಿಲ್ಲ, ಆ ಆದಾಯ ನೇರವಾಗಿ ನನ್ನ ಮಗ ವೆಂಕಟಶಿವ ರವರ ಖಾತೆಗೆ ಸೇರುತ್ತಿತ್ತು ಎಂದರೆ ಸರಿಯಲ್ಲ. ನನ್ನ ಕೈಗೆ ಆದಾಯ ಬರುತ್ತಿತ್ತು ಎಂಬ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿ ಡೈರಿಯಲ್ಲಿ ಬರೆದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ನಾನು ಆದಾಯವನ್ನು ಯಾವುದೇ ಡೈರಿಯಲ್ಲಿ ಬರೆಯದೇ ಇದ್ದರೂ ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆದಾಯ ಬಂದಿದ್ದರೇ ಅದನ್ನು ಡೈರಿಯಲ್ಲಿ

ಬರೆದಿದ್ದರೆ ಆ ಬಗ್ಗೆ ತಕರಾರಿನಲ್ಲಿ ಹೇಳಿ ಡೈರಿಯನ್ನು ಹಾಜರುಪಡಿಸುತ್ತಿದ್ದೆ, ಯಾವುದೇ ಆದಾಯ ನನಗೆ ಬಂದಿಲ್ಲ ಎಂದರೆ ಸರಿಯಲ್ಲ.

27. ನನ್ನ ಮಗ ವೆಂಕಟಶಿವ ಮೋಟರ್ ಸೈಕಲ್, ಕಾರನ್ನು ಖರೀದಿಸಿದ್ದ ಎಂದರೆ ಸಾಕ್ಷಿ ಲೋನ್ ಮಾಡಿಸಿ ನಾನೇ ಕೊಡಿಸಿದ್ದೆ ಎಂದು ನುಡಿಯುತ್ತಾರೆ. ನಾನು ಲೋನ್ ಮಾಡಿಸಿದ ಯಾವುದೇ ಮೋಟರ್ ಸೈಕಲ್ ಮತ್ತು ಕಾರನ್ನು ನನ್ನ ಮಗ ವೆಂಕಟಶಿವ ರವರಿಗೆ ಕೊಡಿಸಿಲ್ಲ ಎಂದರೆ ಸರಿಯಲ್ಲ. ನಾನು ಲೋನ್ ಮಾಡಿಸಿ ಆ ವಾಹನಗಳನ್ನು ಆತನಿಗೆ ಕೊಡಿಸಿದ ಬಗ್ಗೆ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ಆ ಸಾಲದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಸಾಲ ಬಾಕಿ ಇರುವುದರಿಂದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ.

28. ನಾನು ನನ್ನ ಮಗ ವೆಂಕಟಶಿವ ರವರ ಕುಟುಂಬಕ್ಕೆ ಒಂದು ರೂಪಾಯಿ ಹಣವನ್ನು ಸಹ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮಗ ವೆಂಕಟಶಿವ ರವರ ಕುಟುಂಬಕ್ಕೆ ಹಣವನ್ನು ಖರ್ಚು ಮಾಡಿದ ಬಗ್ಗೆ ದಾಖಲೆಗಳು ನನ್ನ ಬಳಿ ಇಲ್ಲ ಎಂದರೆ ನನ್ನ ಮೊಮ್ಮಗನಿಗೆ ಪಾವತಿಸಿದ್ದ ಎಲ್.ಐ.ಸಿ ದಾಖಲೆಗಳು ಇವೆ ಎಂದು ನುಡಿಯುತ್ತಾರೆ. ನನಗೆ ಯಾವುದೇ ಆದಾಯ ಇಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ವೆಂಕಟಶಿವ ವಿದ್ಯಾಭ್ಯಾಸ ಮಾಡಿದ ಕಾರಣ ಬೆಂಗಳೂರಿಗೆ ಹೋಗಿ ಸ್ವತಃ ಸಂಪಾದನೆ ಮಾಡಿ ಆಸ್ತಿಗಳನ್ನು ಖರೀದಿಸಿದ್ದ ಎಂದರೆ ಸರಿಯಲ್ಲ. ನನ್ನ ಮಗ

ವೆಂಕಟಶಿವ ರವರು ತೀರಿಕೊಂಡ ನಂತರ ಆತನ ಹೆಂಡತಿ ಮತ್ತು ಮಗನಿಗೆ ಊರಿನಲ್ಲಿರುವ ಆಸ್ತಿಗಳಲ್ಲಿ ಭಾಗ ಇದೆ ಎಂದರೆ ಸರಿ.

29. ನನ್ನ ಮಗ ವೆಂಕಟಶಿವ ರವರು ಹೆಸರಿನಲ್ಲಿರುವ ಬೆಂಗಳೂರಿನ ಆಸ್ತಿಗಳಲ್ಲಿ ನನಗಾಗಲಿ, ವಾದಿಗಾಗಲಿ ನನ್ನ ಕುಟುಂಬದ ಇತರೆ ಸದಸ್ಯರಿಗಾಗಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ಮಗ ವೆಂಕಟಶಿವ ರವರ ಹೆಂಡತಿ ಮತ್ತು ಮಗ ಸೌಕರ್ಯವಾಗಿ ಇರುವುದರಿಂದ ಅವರ ಆಸ್ತಿಯನ್ನು ಲಪಟಾಯಿಸಬೇಕೆಂದು ನನ್ನ ಮಗನಾದ ವಾದಿಯ ಕಡೆಯಿಂದ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

30. ಮನೆ ಯಜಮಾನನಾಗಿ ಯಾವುದೇ ಆಸ್ತಿಯನ್ನು ಖರೀದಿಸಿದ್ದರೆ ಆ ಆಸ್ತಿಯ ದಾಖಲೆ ಮನೆ ಯಜಮಾನನ ಬಳಿಯೇ ಇರುತ್ತದೆ ಎಂದರೆ ಸರಿ. ನನ್ನ ಮಗ ವೆಂಕಟಶಿವ ಬೆಂಗಳೂರಿನ ಖರೀದಿಸಿರುವ ಮನೆ, ನಿವೇಶನ, ವಾಟರ್ ಟ್ಯಾಂಕರ್, ಕಾರು, ಮೋಟಾರ್ ಸೈಕಲ್ ಗಳ ದಾಖಲೆಗಳ ಮೂಲ ಪ್ರತಿಗಳು ನನ್ನ ಬಳಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಬ್ಯಾಂಕಿನಲ್ಲಿ ಇವೆ ಎಂದು ನುಡಿಯುತ್ತಾರೆ. ಆ ದಾಖಲೆಗಳು ನನ್ನ ಬಳಿ ಅಥವಾ ಬ್ಯಾಂಕಿನಲ್ಲಿ ಇವೆ ಎಂಬ ಬಗ್ಗೆ ನನ್ನ ತಕರಾರಿನಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

31. ಬೆಂಗಳೂರಿನಲ್ಲಿ ಇರುವ ಅಸ್ತಿಗಳ ಎಲ್ಲಾ ದಾಖಲೆಗಳು ಸಹ ನನ್ನ ಮಗ ವೆಂಕಟಶಿವ ರವರ ಬಳಿಯೇ ಇದ್ದವು ಎಂದರೆ ಸರಿಯಲ್ಲ. ನನ್ನ ಮಗ ವೆಂಕಟಶಿವ ರವರು ತೀರಿಕೊಂಡ ಬಳಿ ಆ ಆಸ್ತಿಯ ಎಲ್ಲಾ ದಾಖಲೆಗಳು ಆತನ ಹೆಂಡತಿಯ ಬಳಿ ಇವೆ

ಎಂದರೆ ಸರಿಯಲ್ಲ. ಬೆಂಗಳೂರಿನಲ್ಲಿರುವ ಆಸ್ತಿಗಳು ನನ್ನ ಮಗ ವೆಂಕಟಶಿವ ರವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಬೆಂಗಳೂರಿನಲ್ಲಿರುವ ಆಸ್ತಿಗಳಲ್ಲಿ ನನಗೆ ಯಾವುದೇ ಭಾಗ ಇಲ್ಲ ಎಂದರೆ ಸರಿಯಲ್ಲ. ನನ್ನ ಮಗ ವೆಂಕಟಶಿವ ರವರು ತೀರಿಕೊಂಡ ಬಳಿಕ ಯಾವುದೇ ಆಸ್ತಿಗಳನ್ನು ಸಂಪಾದಿಸಿಲ್ಲ ಎಂದರೆ ನಿಜ. ನನ್ನ ಮಗ ವೆಂಕಟಶಿವ ರವರು ರಿಯಲ್ ಎಸ್ಟೇಟ್ ನಲ್ಲಿ ಸಂಪಾದಿಸುತ್ತಿದ್ದ ಹಣದಿಂದ ಬೆಂಗಳೂರಿನ ಎಲ್ಲಾ ಆಸ್ತಿಗಳು ಸಂಪಾದಿಸಿದ್ದ ಆ ನಂತರ ಯಾವುದೇ ಆಸ್ತಿಗಳನ್ನು ಸಂಪಾದಿಸಿಲ್ಲ ಎಂದರೆ ಸರಿಯಲ್ಲ.

32. ನನ್ನ ಮಗ ವೆಂಕಟಶಿವ ನಿಡಿ 15 ರಂತೆ ಒಪ್ಪಿಗೆ ಪತ್ರವನ್ನು ಬರೆದುಕೊಟ್ಟಿದ್ದ ಎಂಬುದು ಸುಳ್ಳು, ಆ ದಾಖಲೆಯಲ್ಲಿ ನನ್ನ ಮಗ ವೆಂಕಟಶಿವ ರವರ ಸಹಿ ಸಹ ಇಲ್ಲ ಎಂದರೆ ಸರಿಯಲ್ಲ. ನಿಡಿ 15 ರಲ್ಲಿ ಕಂಡು ಬರುವ ಸಹಿ ನನ್ನ ಮಗ ವೆಂಕಟಶಿವ ರದ್ದು ಅಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ:</u>**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.